OS No. 4/2020

PW-1

**(ಇಂದು ದಿಃ 21-11-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)**

**ಪಾಟೀ ಸವಾಲುಃ- ವಾದಿ ಪರ ಶ್ರೀ.KBR ವಕೀಲರಿಂದಃ-**

ನಾನು ಅ ವಿದ್ಯಾಯವಂತೆ . ನಾನು ಈ ದಾವೆಯನ್ನು ನನ್ನ ತಾತನ ಆಸ್ತಿಗೆ ಸಲ್ಲಿಸಿದ್ದೇನೆ. ನನ್ನ ತಾತನ ಹೆಸರು ಭೀಮರಡ್ಡಿ, ಭೀಮರಡ್ಡಿ ನನ್ನ ತಾಯಿಯ ತಂದೆ. ನನ್ನ ತಾಯಿ ಹೆಸರು ಲಕ್ಷ್ಮೀ . ಲಕ್ಷ್ಮೀ ಗೆ ವಾದಿಯರು ಇಬ್ಬರೇ ಮಕ್ಕಳು. ಮೂಲತ ದಾವಾ ಸ್ವತ್ತು ಭೀಮರಡ್ಡಿಗೆ ಸೇರಿತ್ತು ಎಂದರೆ ಸರಿ. ಭೀಮರಡ್ಡಿ ಗೆ ಒಬ್ಬಳೇ ಮಗಳು ವೇಂಕಮ್ಮ ಎಂದರೆ ಸರಿ. ವೇಂಕಮ್ಮ ರವರ ಗಂಡ ನಾಗರಡ್ಡಿ ಎಂದರೆ ಸರಿ. ವೇಂಕಮ್ಮ ಮತ್ತು ನಾಗರಡ್ಡಿಗೆ 4 ಜನ ಹೆಣ್ಣು ಮಕ್ಕಳು,3 ಜನ ಗಂಡು ಮಕ್ಕಳು. ಅವರುಗಳೆಂದರೆ ನಾಗಮ್ಮ, ಹನುಮರಡ್ಡಿ, ಸಂಜೀವರಡ್ಡಿ , ಸುನಂದ , ವೇಂಕಟರಡ್ಡಿ , ಪದ್ಮ ಮತ್ತು ಶಾಂತಾ ಎಂದರೆ ಸರಿ. ದಾವಾ ಸ್ವತ್ತು ವೇಂಕಮ್ಮನಿಗೆ ಸೇರಿತ್ತು ಎಂದರೆ ಸರಿ. ಸಾಕ್ಷಿ ಮುಂದುವರೆದು ಭೀಮರಡ್ಡಿಯಿಂದ ವೇಂಕಮ್ಮನಿಗೆ ಬಂದಿತ್ತು ಎಂದು ಹೇಳುತ್ತಾರೆ . ದಾವಾ ಸ್ವತ್ತು ನನ್ನ ತಂದೆಯ ತಂದೆ ಕಡೆಯಿಂದ ಬಂದ ಸ್ವತ್ತು ಅಲ್ಲ ಎಂದರೆ ಸರಿ.

2 ಮತ್ತು 3ನೇ ಪ್ರತಿವಾದಿಯರುನನ್ನ ತಂದೆಯ ಎರಡನೇ ಹೆಂಡತಿ ಮಕ್ಕಳು. ಕಾರಣ ಅವರನ್ನು ಪಾರ್ಟೀ ಮಾಡಿದ್ದೇನೆ. 1ನೇೀ ಪ್ರತಿವಾದಿ ಮತ್ತು 3 ನೇ ಪ್ರತಿವಾದಿ ತಾಯಿ ಲಕ್ಷ್ಮೀ ಮದುವೆ ಆಗಿರುವುದು ನನಗೆ ಿಗೊತ್ತಿಲ್ಲಮೊದಲನೇ ಹಂಡತಿ ಪಾರ್ವತಮ್ಮ ತೀರಿ ಹೋದ ಮೇಲೆ 1 ನೇ ಪ್ರತಿವಾದಿ ಲಕ್ಷ್ಮೀ ರವರನ್ನು ಮದುವೆ ಆಗಿದ್ದರು ಎಂದರೆ ಸರಿಯಲ್ಲ, 3 ನೇ ಪ್ರತಿವಾದಿ ತಾಯಿ ಹೆಸರು ಲಕ್ಷ್ಮೀ ಎಂದರೆ ನನಗೆ ಗೊತ್ತಿಲ್ಲ, ಲಕ್ಷ್ಮೀ ಬದುಕಿರುವಾಗ 1 ನೇ ಪ್ರತಿವಾದಿ 2 ನೇ ಪ್ರತಿವಾದಿಯ ತಾಯಿ ಸುನಂದಮ್ಮರವರನ್ನು ಮದುವೆಯಾದರು ಎಂದರೆ ನನಗೆ ಗೊತ್ತಿಲ್ಲ, 2ನೇ ಪ್ರತಿವಾದಿಗೆ ಶಿಲ್ಪ ಹೆಸರಿನ ಅಕ್ಕ ಇದ್ದಾರೆ ಎಂದರೆ ಕೇಳಿದ್ದೇನೆ ಎಂದು ಹೇಳುತ್ತಾರೆ. ದಾವಾ ಆಸ್ತಿ ಈಗ ನನ್ನ ತಂದೆ ಹೆಸರಿನಲ್ಲಿದೆ. ನಾನು ಇತ್ತಿಚಿನ ಪಹಣಿ ನೋಡಿದ್ದೇನೆ. 1 ನೇ ಪ್ರತಿವಾದಿ ನೋಂದಾಯಿತ ದಾನ ಪ್ರತದ ಮೂಲಕ ಅವರ ಮಕ್ಕಳಾದ 2 ಮತ್ತು 3 ನೇ ಪ್ರತಿವಾದಿಯರಿಗೆ ದಾನ ಮಾಡಿದ್ದಾರೆ ಎಂದರೆ ಸರಿಯಲ್ಲ, ನಾನು ಈ ದಾವೆಯಲ್ಲಿ 1 ನೇ ಪ್ರತಿವಾದಿ 2 ಮತ್ತು 3 ನೇ ಪ್ರತಿವಾದಿಯರ ಪರ ಬರೆದು ಕೊಟ್ಟಿರುವ ದಾನ ಪತ್ರ ಪ್ರಶ್ನೆ ಮಾಡಿಲ್ಲ ಎಂದರೆ ಸರಿ.

ನನ್ನ ತಾಯಿ ಹೆಸರು ಲಕ್ಷ್ಮೀ . ನನ್ನ ತಾಯಿಗೆ ಮತ್ತು 1ನೇ ಪ್ರತಿವಾದಿಗೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನನ್ನ ತಾಯಿ 1 ನೇ ಪ್ರತಿವಾದಿ ಹೆಂಡತಿ ಎಂದ ತೋರಿಸಲು ದಾಖಲಾತಿ ಇದೆ. ಸಾಕ್ಷಿ ಮುಂದುವರದು ಹಿರಿಯರ ಸಮ್ಮುಕದಲ್ಲಿ ಅವರಿಬ್ಬರ ಮದುವೆ ಆಗಿದೆ ಎಂದು ಹೇಳುತ್ತಾರೆ. ನನ್ನ ತಾಯಿ ಹನುಮರಡ್ಡಿ ಹೆಂಡತಿ ಎಂದು ತೋರಿಸಲು ದಾಖಲಾತಿ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ಸರಿಯಾಗಿ ಉತ್ತರಿಸುತ್ತಿಲ್ಲ. ನನ್ನ ತಾಯಿ ಲಕ್ಷ್ಮೀ 1ನೇ ಪ್ರತಿವಾದಿಯ ಹೆಂಡತಿ ಅಲ್ಲ ಮತ್ತು ವಾದಿಯಾರಾದ ನಾವು ಅವರ ಮಕ್ಕಳು ಅಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ವಾದಿಯಾರಾದ ನಾವು ಮೊದಲನೇ ಹೆಂಡತಿ ಮಕ್ಕಳು ಎಂದು ಹೇಳುತ್ತಾರೆ.

1ನೇ ಪ್ರತಿವಾದಿಗೆ 4 ಜನ ಹೆಂಡತಿಯರು. ಸಾಕ್ಷಿ ಮುಂದುವರೆದು ಇನ್ನು ಇಬ್ಬರ ಬಗ್ಗೆ ನನಗೆ ಗೊತ್ತಿಲ್ಲ. 1ನೇ ಪ್ರತಿವಾದಿಯ 4 ಜನ ಹೆಂಡತಿಯರನ್ನು ಮತ್ತು ಅವರ ಮಕ್ಕಳನ್ನು ಈ ದಾವೆಯಲ್ಲಿ ಸೇರಿಸಿಲ್ಲ. ಅವರಿಗೆ ಎಷ್ಟು ಜನ ಮಕ್ಕಳು ನನಗೆ ಗೊತ್ತಿಲ್ಲ. 1ನೇ ಪ್ರತಿವಾದಿರವರನ್ನು ನಾನು ನೋಡಿದ್ದೇನೆ . ಅವರು ನನ್ನ ತಂದೆ. ನನ್ನ ತಂದೆಯ ಪೋಟೋ ನನ್ನ ಬಳಿ ಇದೆ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ.

ದಾವಾ ಸರ್ವೇ ನಂಬರ 481 ವಿಸ್ತೀರ್ಣ 6 ಎಕರೆ 19 ಗುಂಟೆ. ನಾನು ಜಮೀನು ನೋಡಿದ್ದೇನೆ ಮತ್ತು ಜಮೀನಿನಲ್ಲಿ ಮುಂಚೆ ಕೆಲಸ ಕೂಡ ಮಾಡಿದ್ದೇನೆ. ದಾವಾ ಜಮೀನು ಭೀಮರಡ್ಡಿರವರಿಂದ ವೇಂಕಮ್ಮನ ಮಕ್ಕಳಾದ ಸಂಜೀವ ರಡ್ಡಿ ಮತ್ತು ವೇಂಕಟರಡ್ಡಿ ಹೆಸರಿಗೆ ನೇರವಾಗಿ ವರ್ಗಾವಣೆ ಆಗಿತ್ತು ಎಂದರೆ ನನ್ನ ತಂದೆ ಹೆಸರಿಗೂ ಆಗಿತ್ತು ಎಂದು ಹೇಳುತ್ತಾರೆ. ಸಂಜೀವರಡ್ಡಿ ಮತ್ತು ವೇಂಕಟರಡ್ಡಿ ಹೆಸರಿಗೆ ತಲಾ 3 ಎಕರೆ 10 ಗುಂಟೆ ಜಮೀನು ದಾಖಲಾದಾಗ 1ನೇ ಪ್ರತಿವಾದಿ ಬೆಂಗಳೂರಿನಲ್ಲಿ ವಾಸ ಮಾಡುತ್ತಿದ್ದರು ಎಂದರೆ ಸರಿ . ಸಾಕ್ಷಿ ಮುಂದುವರೆದು ನಂತರ 1ನೇ ಪ್ರತಿವಾದಿ ಊರಿಗೆ ಬಂದು ತನ್ನ ಭಾಗ ಕೇಳಿದಾಗ ಆತನ ಭಾಗ ಕೊಟ್ಟಿದ್ದಾರೆ ಎಂದು ಹೇಳುತ್ತಾರೆ. ದಾವಾ ಆಸ್ತಿ ಸಂಜೀವರಡ್ಡಿ ಮತ್ತು ವೇಂಕಟರಡ್ಡಿ ರವರಿಂದ 1ನೇ ಪ್ರತಿವಾದಿಗೆ ಬಂದಿದೆ ಎಂದರೆ ಸರಿ. ದಾವಾ ಸ್ವತ್ತು ನಮ್ಮ ಪೀತ್ರಾರ್ಜೀತ ಸ್ವತ್ತು ಅಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತು ನಮ್ಮ ಜಂಟಿ ಕುಟುಂಬದ ಸ್ವತ್ತು ಕೂಡ ಅಲ್ಲ ಎಂದರೆ ಸರಿಯಲ್ಲ. ವಾದಿಯರು ಮತ್ತು ನನ್ನ ಇಬ್ಬರು ಚಿಕ್ಕಪ್ಪಂದಿರು ಒಟ್ಟು ಕುಟುಂಬದಲ್ಲಿದ್ದೇವೆ.

ನಾವು ಒಟ್ಟು ಕುಟುಂಬದ ಸದಸ್ಯರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಯಾರಿಂದ ಮತ್ತು ಹೇಗೆ ಬಂತು ಎಂದು ತೋರಿಸಲು ದಾಖಲಾತಿ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

2 ಮತ್ತು 3 ನೇ ಪ್ರತಿವಾದಿ ಹೆಸರಿಗೆ ದಾನ ಪತ್ರದ ಆಧಾರದ ಮೇಲೆ ಪಹಣಿ ಆಗಿದ್ದು ಅವರೇ ಮಾಲೀಕರಾಗಿ ದಾವಾ ಸ್ವತ್ತಿನಲ್ಲಿ ಸ್ವಾ ದೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಮಗೂ ದಾವಾ ಸ್ವತ್ತಿನಲ್ಲಿ ಭಾಗ ಇದೆ ಎಂದು ಹೇಳುತ್ತಾರೆ. 2 ಮತ್ತು 3 ನೇ ಪ್ರತಿವಾದಿಯರು ಉಳಿಮೆ ಮಾಡಿ ಬೆಳೆ ಬೆಳೆಯುತ್ತಾರೆ ಎಂದರೆ ಸರಿಯಲ್ಲ. ದಾವಾ ಜಮೀನಿನಲ್ಲಿ ನನ್ನ ತಂದೆ ಕಬ್ಜಾದಲ್ಲಿದ್ದಾರೆ . ದಾವಾ ಸ್ವತ್ತಿನಲ್ಲಿ ನಮಗೆ ಯಾವುದೇ ಹಕ್ಕು ಅಥವಾ ಭಾಗ ಇಲ್ಲ ಎಂದರೆ ಸರಿಯಲ್ಲ. ಪಾರ್ವತಮ್ಮ ತೀರಿ ಹೋಗಿ ಸುಮಾರು 50 ವರ್ಷ ಆಗಿದೆ. ದಾವಾ ಸ್ವತ್ತಿನೇಲ್ಲಿ ನಾವು ಉಳಿಮೆ ಮಾಡುತ್ತೇವೆ ಬೆಳೆಯಲ್ಲಿ ಭಾಗ ಪಡೆಯುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವೆ ಸಲ್ಲಿಸಲು ವ್ಯಾಜ್ಯ ಕಾರಣ ಇಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ. ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಸೇಡಂ.**